**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯಃ ಉತ್ತರ ಕನ್ನಡ : ಕಾರವಾರ**

**ಸ್ಪೆಷಲ್ ಕೇಸ್ ನಂ. 7/2015**

**ದೋ.ಸಾ. : 4 ಫ್ರಾ.ಸಾ. : 4**

ಸಾಕ್ಷಿಯ ಹೆಸರು : ಸಂತೋಷ

ತಂದೆಯ ಹೆಸರು : ಪ್ರಭಾಕರ ಶೇಟ್

ವಯಸ್ಸು : 42 ವರ್ಷ

ಉದ್ಯೋಗ : ಕಂದಾಯ ನಿರೀಕ್ಷಕ ಗೋಕರ್ಣ

ವಾಸ : ಹೆರವಟ್ಟಾ ಕುಮಟಾ

**ದಿನಾಂಕಃ 31-08-2023 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**<u>ಮುಖ್ಯ ವಿಚಾರಣೆಃ ವಿಶೇಷ ಸರಕಾರಿ ಅಭಿಯೋಜಕರಿಂದ</u>**

1. ನಾನು ಕುಮಟಾದ ಹೆರವಟ್ಟಾ ಗ್ರಾಮದಲ್ಲಿ ವಾಸ ಇದ್ದೇನೆ. 2004 ರಿಂದ ನಾನು ಹೆರವಟ್ಟಾ ಗ್ರಾಮದಲ್ಲಿ ವಾಸ ಇದ್ದೇನೆ. 2007 ರ ಆಗಸ್ಟ್ ತಿಂಗಳಿನಿಂದ ನಾನು ಕಂದಾಯ ಇಲಾಖೆಯಲ್ಲಿ ಗ್ರಾಮ ಲೆಕ್ಕಿಗ ಆಗಿ ಕೆಲಸ ಮಾಡುತ್ತಿದ್ದೆ. ಈಗ್ಗೆ ಒಂದು ವರ್ಷದ ಹಿಂದೆ ಕಂದಾಯ ನಿರೀಕ್ಷಕನಾಗಿ ನಾನು ಪದೋನ್ನತಿ ಹೊಂದಿದ್ದೇನೆ. ನ್ಯಾಯಾಲಯದಲ್ಲಿರುವ ಆರೋಪಿ ನನಗೆ ಗೊತ್ತು. ದಿನಾಂಕ 16.09.2013 ರಂದು ನಾನು ಕರ್ತವ್ಯ ಮುಗಿಸಿಕೊಂಡು ಮನೆಗೆ ಬಂದಿದ್ದೆ. ಆಗ ರಾತ್ರಿ ಸುಮಾರು 9.00 ಗಂಟೆಯಾಗಿತ್ತು . ನಾನು ಮತ್ತು ನನ್ನ ತಾಯಿಯವರು ಇಬ್ಬರೇ ಮನೆಯಲ್ಲಿ ಆಗ ಇದ್ದೆವು . ನಾನು ಅಡಿಗೆ ಮನೆಯಲ್ಲಿ ನನ್ನ ತಾಯಿ ಆರೋಗ್ಯ ಸರಿ ಇಲ್ಲದ ಕಾರಣ ಆಕೆಗೆ ಅಡಿಗೆ ಮಾಡಲು ಸಹಾಯ ಮಾಡಿ ನಂತರ ಅಡುಗೆ ಮನೆಯಲ್ಲಿಯೇ ಊಟ ಮಾಡುತ್ತಿದ್ದೆವು . ಊಟ ಮಾಡಿ ಕೈ ತೊಳೆದುಕೊಂಡು ಮನೆಯ ವರಾಂಡಾಗೆ ಬಂದಾಗ ಏನೋ ಗದ್ದಲದ ಶಬ್ದ ಕೇಳಿತು . ಆಗ ಜೀಪ್ ನಲ್ಲಿ ಆರೋಪಿಯನ್ನು ಕರೆದುಕೊಂಡು ಹೋಗುತ್ತಿದ್ದರು . ಯಾರು ಕರೆದುಕೊಂಡು ಹೋದರು ಎಂದು ಗೊತ್ತಿಲ್ಲ. ಯಾವ ವಿಚಾರಕ್ಕೆ ಕರೆದುಕೊಂಡು ಹೋದರು ಎಂದು ನನಗೆ ಗೊತ್ತಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಮಾನ್ಯ ಅಭಿಯೋಜಕರು ಅನುಮತಿಯನ್ನು ಕೇಳುತ್ತಾರೆ. ಸಾಕ್ಷಿಯ ಹೇಳಿಕೆಯನ್ನು ಗಮನಿಸಿ ಅನುಮತಿ ನೀಡಲಾಯಿತು)

**ಪಾಟೀ ಸವಾಲುಃ ವಿಶೇಷ ಸರಕಾರಿ ಅಭಿಯೋಜಕರಿಂದ**

2. ಈ ಪ್ರಕರಣದಲ್ಲಿ ಲೋಕಾಯುಕ್ತ ಪೊಲೀಸ್ ನವರು ನನ್ನ ಹೇಳಿಕೆ ಪಡೆದಿದ್ದಾರೆ ಎಂದರೆ ನನಗೆ ನೆನಪಿಲ್ಲ. "ದಿನಾಂಕ 16.09.2013 ರಂದು ಸಾಯಂಕಾಲ ಹೆರವಟ್ಟಾದ ನಮ್ಮ ಮನೆಯ ಹೊರಗೆ ವರಾಂಡಾದಲ್ಲಿ ನಿಂತಿದ್ದಾಗ ನಮ್ಮ ಕೇರಿಯ ಶ್ರೀ ಗಣೇಶ ನಾಯ್ಕರವರು ತಮ್ಮ ಹಿರೋ ಹೊಂಡಾ ಸೈಕಲ್ ಮೇಲಾಗಿ ಬರುತ್ತಿದ್ದು, ಅವರನ್ನು ಹಿಂಬಾಲಿಸಿ ಬಂದಿರುವ ಒಂದು ವಾಹನವು ಅವರನ್ನು ಅವರು ಮನೆಗೆ ಹೋಗುವ ದಾರಿಯಲ್ಲಿ ಅಡ್ಡಗಟ್ಟಿ................ ... ಫಿರ್ಯಾದಿಯಿಂದ ರೂ. 5000/- ಗಳ ಲಂಚದ ಹಣಕ್ಕೆ ಒತ್ತಾಯಿಸಿ ಕೊನೆಗೆ ಮೂರು ಸಾವಿರ ರೂ. ಗಳ ಲಂಚದ ಹಣವನ್ನು ಪಡೆದ ಬಗ್ಗೆ ನನಗೆ ಗೊತ್ತಾಯಿತು " ಎಂದು ನಾನು ತನಿಖಾಧಿಕಾರಿಗೆ ಹೇಳಿಕೆ ಕೊಟ್ಟಿದ್ದೇನೆ ಎಂದರೆ ನನಗೆ ನೆನಪಿಲ್ಲ. ಹೇಳಿಕೆಯ ಸದರಿ ಭಾಗವನ್ನು ನಿ.ಪಿ. 40 ಎಂದು ಗುರುತಿಸಲಾಯಿತು. (ಸದರಿ ಹೇಳಿಕೆಯ ಭಾಗವನ್ನು ಸಂಪೂರ್ಣವಾಗಿ ವಿಶೇಷ ಸರ್ಕಾರಿ ಅಭಿಯೋಜಕರು ಸಾಕ್ಷಿಗೆ ಓದಿ ಹೇಳಿದ್ದಾರೆ ). ಆರೋಪಿ ನನ್ನ ಗ್ರಾಮದವರು ಎಂದರೆ ಹೌದು . ಆರೋಪಿ ನನಗೆ ಪರಿಚಯ ಎಂದರೆ ಹೌದು . ಆರೋಪಿಯು ಚುನಾವಣೆ ಕರ್ತವ್ಯಕ್ಕೆಲ್ಲಾ ಬರುತ್ತಿದ್ದರು ಆಗ ನನಗೆ ಅವರ ಪರಿಚಯ ಆಗಿತ್ತು. ಆ ಪರಿಚಯದ ಕಾರಣ ಆರೋಪಿಯನ್ನು ಬಚಾವು ಮಾಡುವುದಕ್ಕಾಗಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ ಎನ್ ವಿ ಎನ್ ರವರಿಂದ**

3. ಆರೋಪಿಯು ನನ್ನ ಸಂಬಂಧಿ ಅಲ್ಲ ಮತ್ತು ನನ್ನ ಜಾತಿಯವನು ಅಲ್ಲ ಮತ್ತು ಅವನ ಬಳಿ ನನಗೆ ಯಾವುದೇ ವ್ಯವಹಾರ ಇರುವುದಿಲ್ಲ ಎಂದರೆ ಹೌದು . ಆರೋಪಿಗೆ ನಾನು ಯಾವತ್ತೂ ಉಪಕಾರ ಮಾಡಿಲ್ಲ ಮತ್ತು ನನಗೆ ಆರೋಪಿ ನನಗೆ ಯಾವತ್ತೂ ಉಪಕಾರ ಮಾಡಿಲ್ಲ ಎಂದರೆ ಹೌದು . ಆರೋಪಿ ಬಗ್ಗೆ ನನಗೆ ಯಾವುದೇ ಮುಲಾಜು ಇರುವುದಿಲ್ಲ ಎಂದರೆ ಹೌದು . ನನ್ನ ಮನೆಯಿಂದ ಕುಮಟಾದ ತಾಲೂಕು ಪಂಚಾಯತಿ ಕಚೇರಿಗೆ 500 ಮೀಟರ್ ದೂರ ಇದೆ . ಬೈಕ್ ನಲ್ಲಿ ಅಲ್ಲಿಗೆ 4 ರಿಂದ 5 ನಿಮಿಷದಲ್ಲಿ ಹೋಗಬಹುದು . ನನ್ನ ಮನೆಯ ಸುತ್ತಮುತ್ತಲೂ ಸುಮಾರು 50 ಮನೆ ಇವೆ ಎಂದರೆ ಹೌದು . ನನ್ನ ಮನೆಯ ಹತ್ತಿರ ಸಾಣಿ ಅಮ್ಮ ದೇವಸ್ಥಾನ ಇದೆ . ಆ ದೇವಾಸ್ಥನಕ್ಕೆ ಭಕ್ತರು ಎಲ್ಲಾ ಸಮಯದಲ್ಲಿ ಬರುತ್ತಿರುತ್ತಾರೆ ಎಂದರೆ ಹೌದು . ನನ್ನ ಮನೆ ಎದುರುಗಡೆ ರಸ್ತೆಯಲ್ಲಿ ವಾಹನಗಳು ತಿರುಗಾಡುತ್ತಿರುತ್ತವೆ

ಎಂದರೆ ಹೌದು . ಯಾರಿಗೆ ಸೇರಿದ ವಾಹನದಲ್ಲಿ ಯಾರ ವಾಹನದಲ್ಲಿ ಯಾರು ಯಾರನ್ನು ಕರೆದುಕೊಂಡು ಹೋದರು ಎಂದು ನನಗೆ ಗೊತ್ತಾಗಲಿಲ್ಲ ಆದರೆ ನಂತರ ಜನ ಆರೋಪಿಯನ್ನು ಕರೆದುಕೊಂಡು ಹೋದರು ಎಂದು ಮಾತನಾಡಿಕೊಳ್ಳುತ್ತಿದ್ದರು . ಜನ ಹೇಳಿದ್ದು ಎಂದು ನಾನು ಪೊಲೀಸ್ ನವರಿಗೆ ಹೇಳಿಲ್ಲ. ನನ್ನ ಮನೆ ಬಳಿ ಯಾರನ್ನೂ ಕರೆದುಕೊಂಡು ಹೋದ ಘಟನೆಯೇ ನಡೆದಿಲ್ಲ ಎಂದರೆ ಕರೆದುಕೊಂಡು ಹೋಗಿದ್ದನ್ನು ನಾನು ನೋಡಿರುವುದಿಲ್ಲ.

**ಮರು ವಿಚಾರಣೆ: – ಇಲ್ಲ –**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ)

ಓ.ಹೇ.ಕೇ.ಸ.ಇ.

(ಡಿ.ಎಸ್. ವಿಜಯಕುಮಾರ್)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರ ಕನ್ನಡ , ಕಾರವಾರ